(ಸಿಹಿ ಸಮೋಸಾ) ಹಾಗೂ ಚಹಾವನ್ನು ಖರೀದಿಸುತ್ತಿದ್ದುದನ್ನು ನೋಡಿದ್ದೇನೆ. ಅದನ್ನು ತರುತ್ತಿದ್ದ ಆಕೆ ಮೊದಲಿಗೆ ತನ್ನ ಪತಿಯ ಕೈಗೆ ಗುಲ್‌ಗುಲಾ ನೀಡುತ್ತಿದ್ದಳು. ಆತ ಅದನ್ನು ತಿಂದ ನಂತರ ಚಹಾದ ಗ್ಲಾಸನ್ನು ಆತನಿಗೆ ನೀಡುತ್ತಿದ್ದಳು. ಆತ ಅದನ್ನು ಕುಡಿದು ಮುಗಿಸುವವರೆಗೆ ಎಚ್ಚರಿಕೆಯಿಂದ ಗಮನಿಸುತ್ತ ತಾನೂ ಚಹಾ ಕುಡಿಯುತ್ತಿದ್ದಳು. ಮಧ್ಯಾಹ್ನದ ಊಟಕ್ಕೆಂದು ಆಕೆ ಒಂದು ಅಲ್ಯೂಮಿನಿಯಮ್ ಊಟದ ಡಬ್ಬದಲ್ಲಿ ಅನ್ನವನ್ನು ತರುತ್ತಿದ್ದಳು. ಗಿರಾಕಿಗಳು ಇಲ್ಲದ ಸಮಯವನ್ನು ನೋಡಿ ಆಕೆ ಆ ಅನ್ನಕ್ಕೆ ಸ್ವಲ್ಪ ನೀರು ಮತ್ತು ಉಪ್ಪನ್ನು ಬೆರೆಸಿ ಕೈತುತ್ತಿನ ರೀತಿಯಲ್ಲಿ ಆತನಿಗೆ ತಿನ್ನಿಸುತ್ತಿದ್ದಳು; ಆತನ ಕೈಗೆ ಒಂದು ಹಸಿಮೆಣಸನ್ನು ನೀಡಿರುತ್ತಿದ್ದಳು. ಪ್ರತಿ ತುತ್ತನ್ನು ತಿಂದ ನಂತರವೂ ಆತ ಆ ಮೆಣಸಿನ ಚೂರನ್ನು ಕಚ್ಚಿಕೊಳ್ಳುತ್ತಿದ್ದ; ಉಪ್ಪಿನಕಾಯಿಯನ್ನು ನಾವು ನಂಜಿಕೊಳ್ಳುವಂತೆ. ಆತ ತಿಂದು ಉಳಿಸಿದ ಅನ್ನವನ್ನು ಆಕೆ ತಾನೂ ತಿನ್ನುತ್ತ ಮಗಳಿಗೂ ತಿನ್ನಿಸುತ್ತಿದ್ದಳು. ಇದರ ನಡುವೆ ಯಾರಾದರೂ ಗಿರಾಕಿ ಬಂದರೆ, ಕೈಗಳನ್ನು ತೊಳೆದುಕೊಂಡು ತರಕಾರಿ ತೂಗುತ್ತಿದ್ದಳು; ಹಣ ತೆಗೆದುಕೊಳ್ಳುತ್ತಿದ್ದಳು.

ನಡುನಡುವೆ ಮಗಳನ್ನು ಮಲಮೂತ್ರ ವಿಸರ್ಜನೆಗೆ ಸಮೀಪದ ನಾಲೆಯ ಬಳಿಗೆ ಕರೆದುಕೊಂಡು ಹೋಗುತ್ತಿದ್ದಳು. ಅವಳ ಸೇವೆಯನ್ನು ಮಾಡುತ್ತಿದ್ದಳು. ನಾನು ತೀರಾ ಸಮೀಪದಿಂದ ಗಮನಿಸಿದ್ದೇನೆ, ಇಷ್ಟೆಲ್ಲಾ ಕೆಲಸವನ್ನು ಮಾಡುವಾಗ ಆಕೆಯ ಮುಖದಲ್ಲಿ ಸ್ವಲ್ಪವೂ ಬೇಸರದ, ಉದಾಸೀನದ, ಅಸಮಾಧಾನದ ಗೆರೆಯನ್ನು ನಾನು ಕಂಡಿಲ್ಲ. ಅದು ಆಕೆಯ ಕರ್ತವ್ಯನಿಷ್ಠೆಯ ಪ್ರತೀಕವೋ, ಗಂಡ ಹಾಗೂ ಮಗುವಿನ ಮೇಲಿನ ಪ್ರೀತಿಯ ಪರಾಕಾಷ್ಠೆಯೋ ಒಂದೂ ಅರ್ಥವಾಗಲಿಲ್ಲ. ಆಕೆಯ ತಾಳ್ಮೆ ಹಾಗೂ ಸಹನೆಗೆ ಹೇಗೆ ಪ್ರತಿಕ್ರಿಯಿಸಬೇಕೋ ತಿಳಿಯದಾಯಿತು.

★★★

‘‘ಏಳೇ, ಸೋನಾಕ್ಷಿ, ಇನ್ನೂ ಮಲಗಿದ್ದೀಯಲ್ಲ...’’

‘‘ಬಿಡೋ ಪ್ಲೀಸ್, ನಾನು ಮಲಗಿಕೊಳ್ಳಬೇಕು. ರಾತ್ರಿಯೆಲ್ಲಾ ಜಾಗರಣೆ ಮಾಡಿಸಿಬಿಡ್ತೀಯಾ, ಬೆಳಿಗ್ಗೆನೂ ಮಲಗೋಕೆ ಬಿಡ್ತಿಲ್ಲ...’’

‘‘ಏ... ನಾನು ರಮಣಿ; ನಿನ್ನ ರಮಣ ಅಲ್ಲ. ತಾವು ಈ ಕ್ಷಣ ಮಲಗಿರುವುದು ಹಾಸ್ಟೆಲ್‌ನ ಮಂಚದ ಮೇಲೆ; ಮಧುಮಂಚದ ಮೇಲಲ್ಲ. ಈ ದಿನ ತಮಗೆ ಕೊನೆಯ ಎಕ್ಸಾಮ್ ಇದೆ...’’ ರೂಂಮೇಟ್ ರಮಣಿ ಹೇಳಿದಾಗ ಗಡಬಡಿಸಿ ಎದ್ದಿದ್ದೆ.

ಗೆಳತಿಗೆ ಧನ್ಯವಾದ ಹೇಳಿ, ಬೇಗ ಬೇಗ ಬೆಳಗಿನ ಕೆಲಸಗಳನ್ನೆಲ್ಲಾ ಮುಗಿಸಿಕೊಂಡು, ಪರೀಕ್ಷೆ ಬರೆಯುವುದಕ್ಕೆ ನಡೆದಿದ್ದೆ. ಅದು ನನ್ನ ಎಂ.ಎ. ಕೊನೆಯ ವರ್ಷದ ಕೊನೆಯ ಪರೀಕ್ಷೆ. ಮುಗಿಸಿಬಿಟ್ಟರೆ ಧಾರವಾಡದ ಯೂನಿವರ್ಸಿಟಿ ಕ್ಯಾಂಪಸ್‌ಗೆ ಗುಡ್ ಬೈ.

ಬದುಕೇ ಬೇಸರವಾಗಿ ಬಂದವಳಿಗೆ ಹೊಸ ಬದುಕನ್ನು, ಬದುಕುವ ಆಸೆಯನ್ನು ತುಂಬಿದ ಪೇಡಾ ನಗರಿ. ಕವಿಗಳು, ಸಾಹಿತಿಗಳು ಬಿಡುವ ಉಸಿರಿನಿಂದ ಹೊರಬಂದ ಜ್ಞಾನಗಂಗೆಯನ್ನು ಮೈತುಂಬಿಸಿಕೊಂಡು, ಒಂದರ ನಂತರ ಒಂದರಂತೆ ಎರಡು ಎಂ.ಎ. ಮಾಡಲು ದಾರಿ ಮಾಡಿಕೊಟ್ಟ ‘ಕ್ಯಾಂಪಸ್!’

ನಿಜ, ನಾಲ್ಕು ಹೆಣ್ಣುಮಕ್ಕಳನ್ನು ಹುಟ್ಟಿಸಿದ ಅಪ್ಪ; ಅಮ್ಮನ ಕಷ್ಟವನ್ನೇ ಅರ್ಥ ಮಾಡಿಕೊಳ್ಳದ ಅಪ್ಪ; ಅಮ್ಮನ ಶರೀರ ದುರ್ಬಲಗೊಂಡಿದ್ದರೂ ಗಂಡು ಮಗುವಾಗಲೆಂದು ಕೊನೆಯ ಪ್ರಯತ್ನ ಮಾಡಿದ್ದ ಅಪ್ಪ; ಮಗುವು ಅಮ್ಮನ ಹೊಟ್ಟೆಯಲ್ಲಿಯೇ ಸಾವನ್ನಪ್ಪಿ, ಅದನ್ನು ಹೊರತೆಗೆಯುವಾಗ ಅಮ್ಮನೂ ಇಹಲೋಕ ತ್ಯಜಿಸಿದಾಗ ನಾವು ನಾಲ್ಕು ಹೆಣ್ಣುಮಕ್ಕಳ ‘ಪೋಷಣೆ’ಗಾಗಿ ಮತ್ತೊಂದು ಮದುವೆಯಾದ ಅಪ್ಪ, ಚಿಕ್ಕಮ್ಮ ನೀಡುತ್ತಿದ್ದ ಹಿಂಸೆಯಿಂದ ನಾವು ನರಳುತ್ತಿದ್ದಾಗ ಆಕೆಯ ಸೆರಗಿನ